# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ:06ನೇ ಜೂನ್ 2020

ಸಂಖ್ಯೆ:66

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ವಾಹನಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಹೊರ ತೆಗೆದುಕೊಂಡು ಹೋಗುವ ಬಗ್ಗೆ.

*****

ವಿಧಾನ ಪರಿಷತ್ತಿನ ಸದಸ್ಯರಗಳು ವಾಹನಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಹೊರ ತೆಗೆದುಕೊಂಡು ಹೋಗುವ ಬಗ್ಗೆ ಕೆಲವು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದ್ದ ವ್ಯವಸ್ಥೆಯನ್ನು ಮುಂದುವರೆಸಲಾಗಿದ್ದು, ಈ ಸಂಬಂಧ ಶಾಸಕರ ಭವನದ ಒಂದು ಇನ್ನೋವಾ ವಾಹನವನ್ನು ಈ ಕೆಳಕಂಡ ದರಗಳನ್ವಯ ಕಾಯ್ದಿರಿಸಲಾಗಿದೆ.

| ಕಿ.ಮೀ.ಒಂದಕ್ಕೆ ನಿಗದಿಪಡಿಸಿರುವ ಬಾಡಿಗೆ ದರ | ದಿನವೊಂದಕ್ಕೆ ನಿಗಧಿಪಡಿಸಿರುವ ಕನಿಷ್ಠ ಕಿ.ಮೀ.ಗಳು | ದಿನವೊಂದಕ್ಕೆ ಪಾವತಿಸಬೇಕಾಗಿರುವ ಕನಿಷ್ಠ ಬಾಡಿಗೆ ಹಣ | ವಾಹನ ಚಾಲಕರ ಬಾಟಾ ದಿನವೊಂದಕ್ಕೆ (ರೂ.) ಪ್ರತ್ಯೇಕ |
|---|---|---|---|
| 12.00 (2 ದಿನಗಳಿಗೆ)<br>15.00 (ಎರಡು ದಿನಗಳ ನಂತರ) | 200 ಕಿ.ಮೀ. | ರೂ. 2,400/- | 400.00 |

- ನಿರೀಕ್ಷಣಾ ಶುಲ್ಕವು (Waiting Charges) ಆದೇಶ ಸಂಖ್ಯೆ:ಕವಿಪ/ ಆ-1/52/ವಾಬಾ/ವಿನಾಯಕ/2017, ಬೆಂಗಳೂರು, ದಿನಾಂಕ:05.09.2017ರ ಪ್ರಕಾರ ಅನ್ವಯವಾಗುತ್ತದೆ.
- ವಾಹನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಹೊರ ಪಡೆಯಬೇಕಾದಲ್ಲಿ, ಮಾನ್ಯ ಶಾಸಕರುಗಳು ಸನ್ಮಾನ್ಯ ಸಭಾಪತಿಯವರಿಗೆ ಕನಿಷ್ಠ 24 ಗಂಟೆ ಮುಂಚಿತವಾಗಿ ಪತ್ರವನ್ನು ನೀಡಿ ಸ್ವತ: ಮಾನ್ಯ ಶಾಸಕರುಗಳೇ ಉಪಯೋಗಿಸುವುದಾಗಿ ಮನವರಿಕೆ ಮಾಡಿಕೊಟ್ಟು ಅನುಮತಿ ಪಡೆಯಬೇಕಾಗಿರುತ್ತದೆ.
- ಗರಿಷ್ಠ 2 ದಿನಗಳವರೆಗೆ ಮಾತ್ರ ವಾಹನವನ್ನು ಬಾಡಿಗೆಗೆ ನೀಡಲಾಗುವುದು. ಸದರಿ ಅವಧಿ ಮೀರಿದಲ್ಲಿ ಪ್ರತಿ ಕಿ.ಮೀ.ರೂ.15/-ರಂತೆ ಹೆಚ್ಚಿನ ದರವನ್ನು ಪಾವತಿಸಬೇಕಾಗುತ್ತದೆ.

. . . . .2

- ವಾಹನ ಸೌಲಭ್ಯಕ್ಕೆ ತಗಲುವ ವೆಚ್ಚವನ್ನು ಕಡ್ಡಾಯವಾಗಿ ಮಾನ್ಯ ಶಾಸಕರ ವೇತನದಿಂದ ಕಟಾಯಿಸಲಾಗುವುದು. ವಾಹನ ಚಾಲಕರ ಬಾಟಾವನ್ನು ಮಾತ್ರ ಸ್ವತ: ಶಾಸಕರೇ ಅವರುಗಳಿಗೆ ಪಾವತಿಸಬಹುದಾಗಿರುತ್ತದೆ.
- ಚಾಲಕರನ್ನು ರೊಟೇಷನ್ ಆಧಾರದ ಮೇಲೆ ಸದರಿ ವಾಹನಕ್ಕೆ ನಿಯೋಜಿಸಲಾಗುವುದು.
- ಮೇಲ್ಕಂಡ ಸೌಲಭ್ಯಕ್ಕೆ ಕೇವಲ ಒಂದು ವಾಹನವನ್ನು ಮಾತ್ರ ಮೀಸಲಿಟ್ಟಿರುವುದರಿಂದ 'ಆದ್ಯತೆ ಮೇರೆಗೆ' ಮಾನ್ಯ ಶಾಸಕರುಗಳ ಮನವಿಯನ್ನು ಪರಿಗಣಿಸಲಾಗುವುದು.

ಮೇಲ್ಕಂಡ ವಾಹನವನ್ನು ಉಪಯೋಗಿಸಲು ತಿಳಿಸಿರುವ ಷರತ್ತುಗಳನ್ನು ಪಾಲಿಸುವ ಮೂಲಕ ಮಾನ್ಯ ಶಾಸಕರುಗಳು ಸಹಕರಿಸಬೇಕೆಂದು ಕೋರಲಾಗಿದೆ.

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

<u>ಗೆ:</u>

ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ.

# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಮತ್ತು ಮಾಜಿ ಸದಸ್ಯರುಗಳು ಉಪಯೋಗಿಸುವ ವಾಹನದ ಬಾಡಿಗೆ ಹಣವನ್ನು ಕಟಾಯಿಸುವ ಬಗ್ಗೆ.

*****

**ಓದಲಾಗಿದೆ:-**

ಕಡತದ ಸಂಖ್ಯೆ:ಕವಿಪ:ಶಾಭ:813:2019, ಕಂಡಿಕೆ ಸಂಖ್ಯೆ: 1 ರಿಂದ 5 ರವರೆಗೆ.

**ಪ್ರಸ್ತಾವನೆ:-**

ಓದಲಾಗಿರುವ ಕಡತದಲ್ಲಿ ದಿನಾಂಕ:10-12-2019ರಂದು ನಡೆದ ಕರ್ನಾಟಕ ವಿಧಾನ ಪರಿಷತ್ತಿನ ವಸತಿ ಸಮಿತಿಯ ಸಭೆಯಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಮಾಜಿ ಸದಸ್ಯರುಗಳು ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವಾಹನವನ್ನು ಉಪಯೋಗಿಸಿದಾಗ ವಾಹನ ಬಾಡಿಗೆ ಹಣವನ್ನು ಆಯಾ ಸದಸ್ಯರುಗಳ ವೇತನದಲ್ಲಿ ಹಾಗೂ ಮಾಜಿ ಸದಸ್ಯರುಗಳ ರೈಲ್ವೆ ಭತ್ಯೆಯಿಂದ ಕಟಾಯಿಸಲು ಶಿಫಾರಸ್ಸು ಮಾಡಿರುತ್ತದೆ. ಸದರಿ ಪ್ರಸ್ತಾವನೆಯನ್ನು ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

**ಆದೇಶ ಸಂಖ್ಯೆ: ಕವಿಪ:ಆ-1: 78 : ಶಾಭವಾಪ್ರವೆಕ:2020**
**ಬೆಂಗಳೂರು, ದಿನಾಂಕ: 04.02.2020.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಮಾಜಿ ಸದಸ್ಯರುಗಳು ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರ ಭವನದ ವಾಹನವನ್ನು ಉಪಯೋಗಿಸಿದಾಗ ವಾಹನದ ಬಾಡಿಗೆ ಹಣವನ್ನು ಅನುಕ್ರಮವಾಗಿ ಸದಸ್ಯರುಗಳ ವೇತನದಲ್ಲಿ ಹಾಗೂ ಮಾಜಿ ಸದಸ್ಯರುಗಳ ರೈಲ್ವೆ ಭತ್ಯೆಯಿಂದ ಕಟಾಯಿಸಲು ದಿನಾಂಕ:01.02.2020 ರಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

**ಮಾನ್ಯ ಸಭಾಪತಿಯವರ ಆದೇಶಾನುಸಾರ,**

**(ಎನ್. ಜಯಂತಿ)**
ಅಧೀನ ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.
4/2/2020

ಗೆ:

ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಮಾಜಿ ಸದಸ್ಯರುಗಳಿಗೆ.